# ಜಯ ಮಂಗಳಂ - ಶ್ರೀವತ್ಸಲಾಂಛನಗೆ

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 128.
2. **Note:** These lyrics are in this reference book only and not in any other standard book that I referred.  Stanza No.3 is not complete.

ರಾಗ: ಭೈರವಿ ತಾಳ: ಝಂಪೆ

ಜಯ ಮಂಗಳಂ ನಿತ್ಯ ಶುಭ ಮಂಗಳಂ || ಪ ||

ಶ್ರೀವತ್ಸಲಾಂಛನಗೆ ಕ್ಷೀರಾಬ್ಧಿ-ವಾಸಗೆ
ಗೋವರ್ಧನೋದ್ಧಾರ ಗೋವಿಂದಗೆ
ಮಾವ ಕಂಸನ ಕೊಂದು ಮಕರಕುಂಡಲ ಧರಿಸಿ
ಜೀವಾತ್ಮನಾದ ಚಿನ್ಮಯರೂಪಗೆ || 1 ||

ಅಂಬುಧಿಯ ಶಯನಗೆ ಅಖಿಲ ಭೂತೇಶಗೆ
ತುಂಬುರ - ನಾರದ ಮುನಿವಂದ್ಯಗೆ
ಎಂಭತ್ತನಾಲ್ಕು ಲಕ್ಷ ಯೋನಿಗಳ ರಾಶಿಯನು
ಗೊಂಬೆಯನು ಮಾಡಿ ಕುಣಿಸುವ ದೇವಗೆ || 2 ||

ಕಂದರ್ಪನಯ್ಯನಿಗೆ ಕೋಟಿ ಲಾವಣ್ಯನಿಗೆ
ಸುಂದರ ಮೂರುತಿ ಹರಿ ಸರ್ವೋತ್ತಮನಿಗೆ
ಕಂದ ಪ್ರಹ್ಲಾದನ ಕಾಯ್ದ ದೇವನಿಗೆ ಅರ
........................................................ || 3 ||

ಪನ್ನಂಗಶಯನಗೆ ಪಾವನ್ನಚರಿತೆಗೆ
ಸನ್ನುತರಾದ ಸಜ್ಜನ ಪಾಲಗೆ
ಎನ್ನೊಡೆಯ ಸಿರಿದೇವಿಯರಸು ಮುದ್ದು ರಂಗಗೆ
ತನ್ನ ನಂಬಿದವರನು ಸಲಹುವವಗೆ || 4 ||

ಕರಿರಾಜವರದಗೆ ಕರುಣಾಸಮುದ್ರಗೆ
ಗರುಡ ಗಮನನಿಗೆ ವೈಭವಹಾರಗೆ
ವರ ಪುರಂದರ ವಿಠಲ ಕಂಬುಕಂದರನಿಗೆ
ಅರವಿಂದನಾಭನಿಗೆ ಅಜನ ಪಿತಗೆ || 5 ||

**Classification:** Keerthane
**Ankita:** purandara vittala
**Location:** NA
**Category:** Krishna Leele, mangala song
**Sub-Category:** Krishna, mangala, parvata, Samudra, govinda, kamsa, jiva, narada, muni, deva, hari sarvottama, prahallada, devi, ranga, gaja, karuna,
**Pravachana:** NA
**Explanation:** NA